**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 33K– ದ್ವಿತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 80** **ಸಮಯ : 03.00ಗಂಟೆಗಳು**

************************************************************************************

**ಅಭ್ಯಾಸ ಪತ್ರಿಕೆ–5**

************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4X1=4**

1. ಕಾರ್ಯ ಪದದ ತದ್ಭವ ರೂಪ.
   ಎ) ಕಾಯಕ ಬಿ) ಕಾವ್ಯ
   ಸಿ) ಕಜ್ಜ ಡಿ) ಕೆಲಸ
2. 'ಬೇರೊಬ್ಬ' ಪದದಲ್ಲಿರುವ ಸಂಧಿ.
   ಎ) ಲೋಪ ಬಿ) ಆಗಮ
   ಸಿ) ಆದೇಶ ಡಿ) ಗುಣ
3. 'ನಾಯಕ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.
   ಎ) ಮೂರು ಬಿ) ಆರು
   ಸಿ) ನಾಲ್ಕು ಡಿ) ಐದು
4. 'ಕಾಡು ಮೇಡು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.
   ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ
   ಸಿ) ಕೃದಂತ ಡಿ) ಜೋಡಿಪದ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12X1=12**

5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
6. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
8. ಪಂಡಿತ ಪುಟ್ಟರಾಜ ಗವಾಯಿಗಳ ಗುರುಗಳು ಯಾರು?
9. ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆಯ್ಕೆ ಮಾಡಿಕೊಂಡರು?
10. ಲಂಡನ್ ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು?
11. ಏಣಿಯನ್ನು ಬಳಸಿ ಮೇಲೇರಿದವರಿಗೆ ಏಣಿ ಹಾಕುವ ಸವಾಲು ಏನು?
12. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?
13. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ?
14. ಬಾವ ಬಣ್ಣದ ಸೀರೆಯನ್ನು ಏಕೆ ತಂದನೆಂದು ಜನಪದರು ಹೇಳಿದ್ದಾರೆ?
15. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?
16. ಅರಮನೆಯ ನಾರಿಯರು ಯಾರ ಸ್ಥಾನವನ್ನು ತುಂಬುತ್ತಾರೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8X2=16**

17. ಗಿಳಿಯ ವರ್ತನೆಯು ಸಾಮಾನ್ಯವಾದ ಲೋಕವರ್ತನೆಗೆ ವಿರುದ್ಧವಾಗಿತ್ತು ಹೇಗೆ?
18. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?
19. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಅನುಭವಗಳಿವೆ?
20. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?

ಪು.ಸಂ -೨೧

21. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?
22. ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?
24. ಬದುಕುವ ಬದುವ ಬೇಲಿಯಲ್ಲಿ ಏನೇನು ಇದೆ ಎಂದು ಕವಯಿತ್ರಿ ಹೇಳಿದ್ದಾರೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1X3=3**

25. ಬಸವರಾಜ ಸಬರದ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1X3=3**

26. ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1X3=3**

27. 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1X3=3**

28. 'ಬೆಳೆಯುವ ಸಿರಿ ಮೊಳಕೆಯಲ್ಲಿ'
**ಅಥವಾ**
'ಮನಸ್ಸಿದ್ದರೆ ಮಾರ್ಗ'

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5X3=15**

29. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು
30. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು
31. ನನ್ನ ಕಾಫಿ ಕೂಡ ತುಂಬಾ ಚೆನ್ನಾಗಿರುತ್ತದೆ
32. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು
33. ಧನವಿದ್ದು ಫಲವೇನು ದಯವಿಲ್ಲದನ್ನಕ್ಕ

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X4=4**

34. ಕೆಸರೊಳಿದ್ದರು ______________________
______________________
______________________
______________________ಸಾರ್ಥಕತೆಗೆ.
**ಅಥವಾ**
ಒಂದು ಬಾಣಕೆ ______________________
______________________
______________________
______________________ ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **1X4=4**

35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಅಥವಾ
ತಾಯಿ ಸಿದ್ಧಮ್ಮ ಮತ್ತು ಪುಟ್ಟಯ್ಯರ ನಡುವೆ ನಡೆದ ಸಂಭಾಷಣೆ ಸ್ವಾರಸ್ಯವನ್ನು ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4(2+2)**

ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ, ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳು. ಸಾಂಕ್ರಾಮಿಕ ರೋಗಗಳು ಉಂಟಾಗುತ್ತಿವೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳಿಂದಾಗಿ ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧನೀರು, ಗಾಳಿ, ಆಹಾರ ಸಿಗದೇ ಹೋಗಬಹುದು ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

36. ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದೆ ಏಕೆ? ವಿವರಿಸಿರಿ.

ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದ ಆಗುವ ಪರಿಣಾಮಗಳೇನು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1X4=4**

37. ಮತದಾನದ ಮಹತ್ವ

**ಅಥವಾ**

ಸುದ್ದಿ ಮಾಧ್ಯಮಗಳು

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=5**

38. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ರವಿ/ರಾಧ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಚಲಿತ ದಿನಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಧಾರವಾಡದ ಸುಲೋಚನಾ/ಸೃಜನ್ ಎಂದು ಭಾವಿಸಿಕೊಂಡು ನೀವು ನಿಮ್ಮ ಶಾಲೆಯಿಂದ ಕೈಗೊಂಡ ಪ್ರವಾಸದ ಬಗ್ಗೆ ಬೆಳಗಾವಿಯ ಗೆಳತಿ 'ಸಂಸ್ಕೃತಿ'ಗೆ ಒಂದು ಪತ್ರ ಬರೆಯಿರಿ.

* * * * *